
# ಜ್ಞಾನಶಕ್ತಿ

## ಮಾಸ ಪತ್ರಿಕೆ

# JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 13 Reg. No. : KARBIL / 2005 / 16123 ಫೆಬ್ರವರಿ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 2 ಪ್ರಕಟಣೆ : 12-02-2024




ಭಗವದ್ಭಕ್ತರೆ,

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದ್ಯನೇಕ
ಬಿರುದಾವಲೀ ವಿರಾಜಮಾನರಾದ
ದಕ್ಷಿಣಾಮ್ನಾಯ ಶ್ರೀ ಶೃಂಗೇರೀ ಶಾರದಾಪೀಠಾಧೀಶ್ವರ
ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ
ಪರಮಾನುಗ್ರಹಪುರಸ್ಸರ ಆಶೀರ್ವಾದಗಳಿಂದ

ಸ್ವಸ್ತಿ। ಶ್ರೀ ಶಾಲಿವಾಹನ ಶಕವರ್ಷ ೧೯೪೫ ಶೋಭಕೃನ್ನಾಮ ಸಂವತ್ಸರದ
ಮಾಘಶುದ್ಧ ಅಷ್ಟಮಿ ದಿನಾಂಕ **17-02-2024**ನೇ ಶನಿವಾರ ಪ್ರಾತಃಕಾಲ

**ಶ್ರೀಮಜ್ಜಗದ್ಗುರು ಶಂಕರಾಚಾರ್ಯ**
**ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು**

ನಮ್ಮೆಲ್ಲರ ಶ್ರದ್ಧಾಭಕ್ತಿಪೂರ್ವಕ ಪ್ರಾರ್ಥನೆಯನ್ನು ಮನ್ನಿಸಿ
ಶ್ರೀ ಸುಬ್ರಹ್ಮಣ್ಯ ಸಭೆಗೆ ದಯಮಾಡಿಸಿ
ಸ್ಥಾನಿಕ ಬ್ರಾಹ್ಮಣ ಶಿಷ್ಯಜನರನ್ನು ಆಶೀರ್ವದಿಸಲಿದ್ದಾರೆ.
ಆಸ್ತಿಕ ಬಂಧುಗಳಾದ ತಾವೆಲ್ಲರೂ ಈ ಗುರುವಂದನಾ
ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಶ್ರೀಜಗದ್ಗುರುಗಳ ಅಪಾರ ಕೃಪೆಗೆ
ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

ಸಂಪರ್ಕಿಸಿ :

ಶ್ರೀ ಕರುಣ್ ರಾವ್ ಬೆಳ್ಳೆ - 7337634359 ಶ್ರೀ ಪಿ. ಶ್ರೀಕಾಂತ್ ರಾವ್ - 7795116598

## ಕಾರ್ಯಕ್ರಮ

ಬೆಳಗ್ಗೆ ಗಂಟೆ 7-00 : ಶ್ರೀ ನವಚಂಡೀ ಹವನಾರಂಭ

ಬೆಳಗ್ಗೆ ಗಂಟೆ 10-30 : ಶ್ರೀ ಜಗದ್ಗುರುಗಳವರ ಆಗಮನ, ಪೂರ್ಣಕುಂಭ ಸ್ವಾಗತ
ಶ್ರೀ ಸನ್ನಿಧಾನಂಗಳವರ ದಿವ್ಯಸಾನ್ನಿಧ್ಯದಲ್ಲಿ ಹೋಮಪೂರ್ಣಾಹುತಿ

ಬೆಳಗ್ಗೆ ಗಂಟೆ 11-00 : ಧೂಳೀಪಾದಪೂಜೆ, ಪಾದಪೂಜಾ - ಭಿಕ್ಷಾವಂದನೆಗಳ ಸಮರ್ಪಣೆ

ಬೆಳಗ್ಗೆ ಗಂಟೆ 11-30 : ಶ್ರೀ ಜಗದ್ಗುರುಗಳಿಂದ ಆಶೀರ್ವಚನ
ಶ್ರೀ ಸುಬ್ರಹ್ಮಣ್ಯ ಸಭಾ ಹಾಗೂ ಸ್ಥಾನಿಕ ಬ್ರಾಹ್ಮಣ ಸಮಾಜದ
ಇತರ ಸಂಘ-ಸಂಸ್ಥೆಗಳಿಂದ ಫಲಸಮರ್ಪಣೆ ಶ್ರೀಗುರುಗಳ ಭಿಕ್ಷೆ

ಅಪರಾಹ್ನ ಗಂಟೆ 3-00 : ಶ್ರೀ ಗುರುಗಳಿಗೆ ಬೀಳ್ಕೊಡುಗೆ

**ಈ ಶುಭ ಕಾರ್ಯಕ್ರಮಕ್ಕೆ ಈ ಕೆಳಗಿನಂತೆ ಸಮಾಜ ಬಾಂಧವರ ಸಹಕಾರವನ್ನು ನಿರೀಕ್ಷಿಸಲಾಗಿದೆ.**

### ಶ್ರೀಗುರುಗಳ ಸೇವೆ

| | |
|---|---|
| ಭಿಕ್ಷಾವಂದನೆ | - ₹ 500 |
| ಅಷ್ಟೋತ್ತರ ಶತನಾಮ, ಪಾದಪೂಜೆ ಹಾಗೂ ಭಿಕ್ಷಾವಂದನೆ | - ₹ 1,500 |
| ತ್ರಿಶತೀ ಪಾದಪೂಜೆ ಮತ್ತು ಭಿಕ್ಷಾವಂದನೆ | - ₹ 2,500 |
| ಸಹಸ್ರನಾಮ ಪಾದಪೂಜೆ ಮತ್ತು ಭಿಕ್ಷಾವಂದನೆ | - ₹ 4,500 |

- ತಮ್ಮ ಅನುಕೂಲಕ್ಕೆ ತಕ್ಕಂತೆ ಹೆಸರು ಹಾಗೂ ಹಣವನ್ನು ಮುಂಚಿತವಾಗಿ ದಯಮಾಡಿ ನೀಡುವುದು.
- ಈ ಸಮಾರಂಭಕ್ಕೆ ರೂ. 3 ಲಕ್ಷ ಖರ್ಚನ್ನು ಅಂದಾಜಿಸಲಾಗಿದೆ. ಈ ಬಗ್ಗೆ ಸಮಾಜ ಬಾಂಧವರು ದೇಣಿಗೆಯನ್ನು ನೀಡುವುದು.
- ಶ್ರೀ ಸನ್ನಿಧಾನಂಗಳವರ ಪಾದಸ್ಪರ್ಶದ ಸಂಸ್ಮರಣೆಯಲ್ಲಿ ಕನಿಷ್ಠ ರೂ. 5 ಲಕ್ಷದ ಶಾಶ್ವತ ನಿಧಿಯನ್ನು ಸ್ಥಾಪಿಸಿ, ವೇದಶಾಸ್ತ್ರ ಇತ್ಯಾದಿ ಗೀರ್ವಾಣ ವಿದ್ಯೆಯನ್ನು ಕಲಿಯುವ ಸಮಾಜದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡುವುದು.

ಈ ಮೂರೂ ವಿಚಾರಗಳಲ್ಲಿಯೂ ಸಮಾಜ ಬಾಂಧವರ ಪೂರ್ಣ ಸಹಕಾರವನ್ನು ನಿರೀಕ್ಷಿಸಲಾಗಿದೆ.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಸ್ಕೋಲರ್ಸ್ ಡೇ'


ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ನಡೆಸಲ್ಪಡುವ 'ಸ್ಕೋಲರ್ಸ್ ಡೇ' ಕಾರ್ಯಕ್ರಮವು ಜನವರಿ 28ರಂದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

ಕುಮಾರಿ ಶರಣ್ಯರವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ಆರಂಭವಾಯಿತು. ಕಾರ್ಯಕ್ರಮವನ್ನು ಎಕ್ಸ್‌ಪರ್ಟ್ ಕಾಲೇಜು ಸಮೂಹ ಸಂಸ್ಥೆಯ ಚೇರ್‌ಮೇನ್ ಶ್ರೀ ನರೇಂದ್ರ ನಾಯಕ್ ಹಾಗೂ ಇಸ್ರೋನ ಜನರಲ್ ಮ್ಯಾನೇಜರ್ ಶ್ರೀ ಕೃಷ್ಣಮೋಹನ್ ಶ್ಯಾನುಭೋಗ್ ಹಾಗೂ ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ ದೀಪಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಖಜಾಂಚಿ ಶ್ರೀ ಪಿ. ಶ್ರೀಕಾಂತ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಉಪಸ್ಥಿತರಿದ್ದರು. ಶ್ರೀ ಸಭಾದ ಶೈಕ್ಷಣಿಕ ಸಮಿತಿಯ ಅಧ್ಯಕ್ಷ ಡಾ. ಎ. ಪಿ. ಕೃಷ್ಣ ಅವರು ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು.

ಎಕ್ಸ್‌ಪರ್ಟ್ ಸಂಸ್ಥೆಯ ಶ್ರೀ ನರೇಂದ್ರ ನಾಯಕ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ 'ಶೈಕ್ಷಣಿಕ ಸಾಧನೆಯಿಂದ ವ್ಯಕ್ತಿತ್ವ ವಿಕಸನ' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ 'ಸಮಾಜದಲ್ಲಿ ಒಳ್ಳೆಯವರಾಗಿ ಶಿಸ್ತುಬದ್ಧವಾಗಿ ಬದುಕಿದರೆ ಕಷ್ಟಗಳು ಬಂದರೂ ಅದನ್ನು ಎದುರಿಸುವ ಮನೋಸ್ಥೈರ್ಯ, ಕೌಶಲ ಅಭಿವೃದ್ಧಿಯಾಗುತ್ತವೆ. 'ಹರ ಮುನಿದರೆ ಗುರು ಕಾಯುವ', ಆದರೆ 'ಗುರು ಮುನಿದರೆ ಹರ ಕಾಯಲಾರ' ಎಂದು ಹೇಳುತ್ತಾ ವಿದ್ಯಾಗುರುಗಳ ಮಹತ್ವವನ್ನು ತಿಳಿಸಿದರು.

(2ನೇ ಪುಟಕ್ಕೆ ಮುಂದುವರಿಯುವುದು)



ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696
ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618
ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ
ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ •ಅನಿಲ್ ರಾವ್ ಬಿ.ಎಸ್.
ಗೌರವ ಸಲಹೆಗಾರರು : •ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್
ಪ್ರಕಾಶಕರು : ಹರ್ಷಕುಮಾರ್ ಕೇದಿಗೆ
: 7795116598 ✆ : 9343361618 e-mail : jnanashakthisss@gmail.com



ಶ್ರೀಮತ್ ಪರಮಹಂಸೇತ್ಯಾದಿ ಸಮಸ್ತ ಬಿರುದಾವಲೀ ವಿರಾಜಮಾನರಾದ
ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ
ತತ್ಕರಕಮಲಸಂಜಾತರಾದ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ

## ಗುರುಮಂದಿರದ ಶಿಲಾನ್ಯಾಸ ಮತ್ತು ಭೂಮಿಪೂಜನಾ ಕಾರ್ಯಕ್ರಮ

ಸ್ವಸ್ತಿ। ಶ್ರೀ ಶಾಲಿವಾಹನ ಶಕವರ್ಷ 1945ನೇ ಶೋಭಕೃತ್‌ನಾಮ ಸಂವತ್ಸರದ
ಮಾಘ ಶುಕ್ಲ ದ್ವಾದಶಿ ದಿನಾಂಕ 21-02-2024ನೇ ಬುಧವಾರ
ದಿವಾಘಂಟೆ 8-08ರಿಂದ 9-50ರ ಒಳಗೆ ಸಲ್ಲುವ ಮೀನ ಲಗ್ನ
ಸುಮುಹೂರ್ತದಲ್ಲಿ –

**ಬಂಟ್ವಾಳ ತಾಲೂಕು ಕಾವಳಮುಡೂರು ಗ್ರಾಮದ ಕಾವಳಕಟ್ಟೆ ಎಂಬಲ್ಲಿ**
**ಬಿ. ಸಿ. ರೋಡ್ – ಧರ್ಮಸ್ಥಳ ಹೆದ್ದಾರಿ ಪಕ್ಕದಲ್ಲಿರುವ**
**ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.), ಬಂಟ್ವಾಳ**
ಇದರ ನಿವೇಶನದಲ್ಲಿ ಗುರುಮಂದಿರದ ಶಿಲಾನ್ಯಾಸ ಕಾರ್ಯಕ್ರಮವನ್ನು
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಹಾಗೂ
ತತ್ಕರಕಮಲಸಂಜಾತರಾದ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ
**ಅವರಿಂದ ಪೂಜಿಸಲ್ಪಟ್ಟ ಶಿಲೆಗಳನ್ನು ಸ್ಥಾಪಿಸುವ ಮೂಲಕ**
ನೆರವೇರಲಿದೆ. ಈ ಕಾರ್ಯಕ್ರಮದಲ್ಲಿ ತಾವುಗಳು ಭಾಗವಹಿಸಿ,
ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಸರ್ವ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯ, ವಿಟ್ಲ
ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.), ಬಂಟ್ವಾಳ

Celebrating 60th Year 1963-2023
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಸ್ಕೋಲರ್ಸ್ ಡೇ'

ಮುಖ್ಯ ಅತಿಥಿಗಳಾದ ಇಸ್ರೋದ ಜನರಲ್ ಮ್ಯಾನೇಜರ್ ಶ್ರೀ ಕೃಷ್ಣಮೋಹನ್ ಶ್ಯಾನುಭೋಗ್ ಇವರು **'ಕಠಿಣ ಪರಿಶ್ರಮ ಮತ್ತು ದೃಢನಿಷ್ಠೆ ಯಶಸ್ಸಿಗೆ ಸೋಪಾನ'** ಎಂಬ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಸವಿಸ್ತಾರವಾಗಿ ತಿಳಿಸಿ, ಅಂತರಿಕ್ಷ ವಿಜ್ಞಾನ ಹಾಗೂ ಚಂದ್ರಯಾನದ ಬಗ್ಗೆ ಅರಿವನ್ನು ಮೂಡಿಸಿದರು.

ತದನಂತರ ಸಮೂಹ ಚರ್ಚಾಕಾರ್ಯಕ್ರಮವನ್ನು ಮಂಗಳೂರಿನ ಯಂ.ಸಿ.ಯಫ್. ಕಂಪನಿಯ ಮಾಜಿ ಉಪಾಧ್ಯಕ್ಷರು ಶ್ರೀ ಕೆ. ಪ್ರಭಾಕರ್ ರಾವ್ ಇವರು ನೆರವೇರಿಸಿಕೊಟ್ಟರು. ಸನ್ಮಾನಪತ್ರವನ್ನು ಶ್ರೀಮತಿ ಸುಮನಾ ಎ.ಪಿ. ಕೃಷ್ಣರವರು ವಾಚಿಸಿದರು. ಅನಂತರ ಎಸ್.ಎಸ್.ಎಲ್.ಸಿ.ಯಲ್ಲಿ 618 ಅಂಕವನ್ನು ಪಡೆದು ರ್‍ಯಾಂಕ್‌ಗಳಿಸಿದ ಶ್ರೀ ನಾಗಭೂಷಣ್ ಶಾಸ್ತ್ರಿಯವರ ಪುತ್ರಿ ಕು। ಎಲ್. ಎಲ್. ಅಂಬಿಕಾರವರನ್ನು ಸನ್ಮಾನಿಸಲಾಯಿತು. ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ ಶುಭಾಂಶನೆಗೈದರು.

ಡಾ. ಎ. ಪಿ. ಕೃಷ್ಣರವರು ಸ್ಕಾಲರ್‌ಶಿಪ್ ವಿವರವನ್ನು ನೀಡುತ್ತಾ ಒಟ್ಟು 128 ವಿದ್ಯಾರ್ಥಿಗಳು ಇದರ ಫಲಾನುಭವಿಗಳಾಗಿರುತ್ತಾರೆ. ಇವರೆಲ್ಲರಿಗೆ ಒಟ್ಟು ರೂಪ್ಯಾ 6,49,000/– ವಿತರಿಸಲಾಗಿದೆ. 70 ವಿದ್ಯಾರ್ಥಿಗಳಿಗೆ ರೂಪ್ಯಾ 84,25,000/– ಸಾಲ ಸ್ಕಾಲರ್‌ಶಿಪ್ ಮೂಲಕ ವಿತರಿಸಲಾಯಿತು ಎಂದು ತಿಳಿಸಿದರು.

ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ ಇವರು ಸ್ಕಾಲರ್‌ಶಿಪ್ ವಿತರಣಾ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಚೆಕ್ಕನ್ನು ಫಲಾನುಭವಿಗಳಿಗೆ ದಾನಿಗಳ ಮುಖಾಂತರ ಹಸ್ತಾಂತರಿಸಲಾಯಿತು.

ಶ್ರೀ ನಾಗರಾಜ ಶರ್ಮರವರು ಕಾರ್ಯಕ್ರಮವನ್ನು ನಿರೂಪಿಸಿ, ಧನ್ಯವಾದವನ್ನು ಸಮರ್ಪಿಸಿದರು. ಶ್ರೀ ಸಭಾದ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಫೋಟೋ ಮತ್ತು ವಿಡಿಯೋಗಳನ್ನು ಒದಗಿಸಿ ಸಹಕರಿಸಿದರು.

## ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ

**ಕಡಬ ತಾಲೂಕು, ದ. ಕ.**

**ಶ್ರೀ ಶ್ರೀ ಶ್ರೀ ಶೃಂಗೇರಿ ಪೀಠದ ಮಹಾಜಗದ್ಗುರುಗಳವರ**
**ದಿವ್ಯಹಸ್ತದಿಂದ ಪುನಃಪ್ರತಿಷ್ಠಾಪಿಸಲ್ಪಟ್ಟ**
**ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದ**

### 37ನೇ ಪ್ರತಿಷ್ಠಾ ವಾರ್ಷಿಕೋತ್ಸವವು

ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ
ತಾರೀಕು 16-02-2024ನೇ ಶುಕ್ರವಾರ ರಥಸಪ್ತಮಿ ದಿನದಂದು
ಜರಗಲಿರುವುದು.
ಸಮಾಜ ಬಾಂಧವರೆಲ್ಲರೂ ಈ ದೇವತಾಕಾರ್ಯಗಳಲ್ಲಿ
ಸಹಭಾಗಿಗಳಾಗಬೇಕಾಗಿ ಅಪೇಕ್ಷಿಸುವ –
**ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು**

**ಬೇಕಾಗಿದ್ದಾರೆ**
ಬಿ. ಸಿ. ರೋಡ್‌ನಲ್ಲಿರುವ ಫಾರ್ಮ್‌ಹೌಸ್ ನೋಡಿಕೊಳ್ಳಲು
ಕೃಷಿಯಲ್ಲಿ ಅನುಭವವಿರುವ ಬ್ರಾಹ್ಮಣ ಕುಟುಂಬ ಬೇಕಾಗಿದೆ.
ಮೊಬೈಲ್ : **9448260225**


*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4



# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಕಾಪು ಶ್ರೀ ಮೋಹನ್ ರಾವ್ ಮತ್ತು ಶ್ರೀಮತಿ ರಮಾ ಎಂ. ಬಾಯಿ ಇವರ ಸ್ಮರಣಾರ್ಥ ಅವರ ಪುತ್ರ ಉಡುಪಿ ನಿವಾಸಿ ಕಾಪು ಶ್ರೀ ಸುಧಾಕರ್ ರಾವ್ ಮತ್ತು ಶ್ರೀಮತಿ ಜ್ಯೋತಿ ಸುಧಾಕರ್ ರಾವ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 2,00,000/– (ರೂಪ್ಯಾ ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀಮತಿ ಸಾವಿತ್ರಿ ರಾವ್, ಶ್ರೀಮತಿ ಪಲ್ಲವಿ ರಾವ್, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.





ಮಂಗಳೂರು ನಿವಾಸಿ, ನಿವೃತ್ತ ಕರ್ಣಾಟಕ ಬ್ಯಾಂಕ್ ಅಧಿಕಾರಿ ಶ್ರೀ ಟಿ. ಬಿ. ಮೋಹನ್ ರಾವ್ ತಮ್ಮ ತಂದೆ ದಿ। ಭಾಗವತ ತಾಳೆಪ್ಪಾಡಿ ಶೇಷಪ್ಪಯ್ಯ, ಪುತ್ತೂರು ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 1,00,000/– (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ.ಎಸ್., ನಿರ್ದೇಶಕ ಶ್ರೀ ಯು. ಭುಜಂಗ ರಾವ್, ಶ್ರೀ ಎಂ. ಸುರೇಶ್ ರಾವ್, ಶ್ರೀ ಅನಿಲ್ ಎನ್., ಶ್ರೀ ಸುರೇಶ್ ಕಡಬ ಉಪಸ್ಥಿತರಿದ್ದರು.

ಮಹಾರಾಷ್ಟ್ರದ ಕೋರೆಗಾಂವ್ ನಿವಾಸಿ ಬಜೆ ಶ್ರೀ ಗೋವಿಂದ ರಾವ್ ಇವರ ಸ್ಮರಣಾರ್ಥ ಅವರ ಪುತ್ರಿ ಶ್ರೀಮತಿ ರಚನಾ ರಮೇಶ್ ತನ್ನ ಪತಿ ಶ್ರೀ ಪಿ. ಎನ್. ರಮೇಶ್, ಬೆಂಗಳೂರು ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯಕ್ಕೆ ರೂ. 1,00,000/– (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀಮತಿ ಶೋಭಾ ನಟರಾಜ್, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಉದಯ ಕುಮಾರ್ ಪಿ. ಉಪಸ್ಥಿತರಿದ್ದರು.





ಶ್ರೀ ಆರೂರು ಮಂಜುನಾಥ ರಾವ್ ಸ್ಮರಣಾರ್ಥ ಅವರ ಪತ್ನಿ ಶ್ರೀಮತಿ ಪದ್ಮಾ ಆರೂರು, ಪುತ್ರರಾದ ಶ್ರೀ ವಿಜಯಾನಂದ ಎಂ. ಆರೂರು, ಶ್ರೀ ವಿಶಾಲ್ ಎಂ. ಆರೂರು, ಸೊಸೆಯಂದಿರಾದ ಶ್ರೀಮತಿ ಪಲ್ಲವಿ ವಿ. ಅರೂರು, ಶ್ರೀಮತಿ ಮಾನಸ ವಿಕಾಸ್ ಅರೂರು ಇವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯಕ್ಕೆ ರೂ. 1,00,000/– (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

ನಂದಿಕೂರು ಶ್ರೀ ಸದಾಶಿವ ರಾವ್ ಮತ್ತು ಶ್ರೀಮತಿ ಪಾರ್ವತೀದೇವಿ ಸ್ಮರಣಾರ್ಥ ಅವರ ಪುತ್ರ ಮಂಗಳೂರು ನಿವಾಸಿ, ಕಾರ್ಪೊರೇಶನ್ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಶ್ರೀ ನಂದಿಕೂರು ಶಶಿಧರ್ ಮತ್ತು ಶ್ರೀಮತಿ ಶ್ಯಾಮಲಾ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 50,000/– ಮತ್ತು ಶ್ರೀ ಸಭಾದ ವಿದ್ಯಾರ್ಥಿನಿಧಿಗೆ ರೂ. 50,000/– ಒಟ್ಟು ರೂ. 1,00,000/– (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷ ಡಾ. ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಉಪಸ್ಥಿತರಿದ್ದರು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***



**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಮಂಗಳೂರು ನಿವಾಸಿ ಡಾ। ದಿವಾಕರ್ ರಾವ್ ಮತ್ತು ಶ್ರೀಮತಿ ಸ್ನೇಹಲತಾ ದಿವಾಕರ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಈಗಾಗಲೇ ಸ್ಥಾಪಿಸಿರುವ ಸಾಂತೂರ್ ಶ್ರೀ ಜನಾರ್ದನಯ್ಯ ಮತ್ತು ಶ್ರೀಮತಿ ಜಲಜಾ ಇವರ ಸ್ಮರಣಾರ್ಥ ವಿದ್ಯಾರ್ಥಿನಿಧಿಗೆ ರೂ. 30,000/– ನೀಡಿ ಅದನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

*ಚಿತ್ರ : ಶ್ರೀ ರಘುವೀರ್ ಪೆರ್ಡೂರ್*






ಪಡುಬಿದ್ರೆ ನಿವಾಸಿ ಶ್ರೀ ಬಿ. ಅರವಿಂದ ರಾವ್ ಮತ್ತು ಶ್ರೀಮತಿ ಸಾವಿತ್ರಿ ಅರವಿಂದ ರಾವ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 25,000/– ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸೌರಭ್ ಅರವಿಂದ ರಾವ್, ಶ್ರೀಮತಿ ಪಲ್ಲವಿ ಸೌರಭ್ ರಾವ್, ಶ್ರೀಮತಿ ಜ್ಯೋತಿ ಎಸ್. ರಾವ್, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.

## ಸುರತ್ಕಲ್ ಯುವವೇದಿಕೆಯ ವತಿಯಿಂದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ




ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್ ಯುವವೇದಿಕೆಯ ವತಿಯಿಂದ ಸ್ಥಾನಿಕ ಸಮಾಜದ ಯುವಕರಿಗೆ 10ನೇ ವರ್ಷದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ ಪಣಂಬೂರು NMPT ಮೈದಾನದಲ್ಲಿ ದಿನಾಂಕ 28–01–2024ನೇ ಆದಿತ್ಯವಾರ ನಡೆಸಲಾಯಿತು. ಈ ಪಂದ್ಯಾಟದಲ್ಲಿ ಸ್ಥಾನಿಕ ಸಮಾಜದ 18 ತಂಡಗಳು ಭಾಗವಹಿಸಿದ್ದವು. ಪ್ರಥಮ ಬಹುಮಾನವನ್ನು ಕಟಪಾಡಿ ತಂಡ, ದ್ವಿತೀಯ ಬಹುಮಾನವನ್ನು ಪಡುಬಿದ್ರಿ ತಂಡವು ಪಡೆಯಿತು ಹಾಗೂ ತ್ರೋಬಾಲ್ ಪಂದ್ಯಾಟದಲ್ಲಿ ಕಾರ್ಕಳ ತಂಡ ಪ್ರಥಮ; ಸುರತ್ಕಲ್ ಬಿ – ದ್ವಿತೀಯ ಬಹುಮಾನವನ್ನು ಪಡೆಯಿತು.

## ಜಿಲ್ಲಾಮಟ್ಟದ ರಾಜ್ಯೋತ್ಸವ ಪ್ರಶಸ್ತಿ



ಜಿಲ್ಲಾಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪೆರ್ಡೂರಿನ ಶ್ರೀ ಅಶ್ವತ್ ಹೆಬ್ಬಾರ್ ಸಾವಯವ ಕೃಷಿ ಮತ್ತು ಕೃಷಿಉತ್ಪನ್ನಗಳ ತಯಾರಿಕೆಗಾಗಿ ಅವರಿಗೆ ಶ್ರೇಷ್ಠ ಕೃಷಿಕ ಪ್ರಶಸ್ತಿ ನೀಡಲಾಗಿದೆ. ಉಡುಪಿಯಲ್ಲಿ ನಡೆದ ರಾಜ್ಯೋತ್ಸವ ಸಮಾರಂಭದಂದು ಈ ಪ್ರಶಸ್ತಿಯನ್ನು ಉಡುಪಿಯ ಜಿಲ್ಲಾ ಉಸ್ತುವಾರಿ ಮಂತ್ರಿ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲೆಯ ಶಾಸಕರು ಮತ್ತು ಡಿ.ಸಿ.ಯವರ ಉಪಸ್ಥಿತಿಯಲ್ಲಿ ನೀಡಲಾಯಿತು. ಇವರು ಪೆರ್ಡೂರಿನ ದಿ। ಜಯರಾಮ ಹೆಬ್ಬಾರ್ ಮತ್ತು ಸುಕನ್ಯಾ ಹೆಬ್ಬಾರ್ ಅವರ ಪುತ್ರ.

## ಶುಭವಿವಾಹ

ಶ್ರೀಮತಿ ಸಂಧ್ಯಾ ಮತ್ತು ಶ್ರೀ ಜಯರಾಮ ರಾವ್ ಸಿ. ಬಿ. ಅವರ ಪುತ್ರ **ಚಿ। ಅಶ್ವಥ್** ಮತ್ತು ಶ್ರೀಮತಿ ಅಕ್ಕಮ್ಮ ಮತ್ತು ಶ್ರೀ ಶಾಂತನ ಪಾಟೀಲ್ ಅವರ ಪುತ್ರಿ **ಚಿ। ಸೌ। ಸೌಂದರ್ಯ** ಅವರ ವಿವಾಹ ತಾ. 21–01–2024ನೇ ರವಿವಾರ ಸಂಪಾಜೆ 'ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಸಭಾಭವನ'ದಲ್ಲಿ ನಡೆಯಿತು.

❋ ❋ ❋

ಶ್ರೀಮತಿ ಭಾರತಿ ಮತ್ತು ಹೆಮ್ಮಾಡಿ ಶ್ರೀ ಶಿವಶಂಕರ್ ಹೆಬ್ಬಾರ್ ಇವರ ಪುತ್ರಿ **ಚಿ। ಸೌ। ಅಕ್ಷತಾ** ಹಾಗೂ ಶ್ರೀಮತಿ ನಾಗರತ್ನ ಮತ್ತು ಹುಲ್ಕೋಡು ಶ್ರೀ ನಾಗರಾಜ್‌ರವರ ಪುತ್ರ **ಚಿ। ನರಸಿಂಹಮೂರ್ತಿ** ಇವರ ವಿವಾಹ ತಾ. 21–01–2024ನೇ ರವಿವಾರ ಶಿವಮೊಗ್ಗದ 'ಶ್ರೀ ವೀರಶೈವ ಸಭಾಭವನ'ದಲ್ಲಿ ನಡೆಯಿತು.

## ಉಪನಯನ

ಶ್ರೀ ಐ. ಕೆ. ಅನಂತ್ ಮತ್ತು ಶ್ರೀಮತಿ ಅಕ್ಷತಾರವರ ಸುಪುತ್ರ **ಚಿ। ಅದ್ವೈತ್**ನ ಬ್ರಹ್ಮೋಪದೇಶ ತಾ. 28–1–2024ನೇ ರವಿವಾರ ಮೈಸೂರಿನ 'ಜ್ಞಾನಶಕ್ತಿ ಪ್ರಾರ್ಥನಾ ಮಂದಿರ'ದಲ್ಲಿ ಜರುಗಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು



ದಿ। ಬೆಳ್ಳೆ ಸದಾಶಿವ ರಾವ್‌ರವರ ಪತ್ನಿ **ಶ್ರೀಮತಿ ಇಂದಿರಾ ಬೆಳ್ಳೆ** (89) ತಾ. 23–01–2024ನೇ ಮಂಗಳವಾರ ನಿಧನ ಹೊಂದಿದರು. ಇವರು ಓರ್ವ ಪುತ್ರಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



ದಿ। ಮೋಹನ್ ರಾವ್ ಇವರ ಪುತ್ರ **ಕಾಪು ಶ್ರೀ ಪ್ರಕಾಶ್ ರಾವ್** (67) ತಾರೀಕು 27–01–2024ನೇ ಶನಿವಾರ ಸುರತ್ಕಲ್ ಹೊಸಬೆಟ್ಟುವಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಮರವಂತೆ ಶ್ರೀ ವಾಸುದೇವ ಶಾನುಭೋಗ್ ಇವರ ಧರ್ಮಪತ್ನಿ **ಶ್ರೀಮತಿ ಲಕ್ಷ್ಮೀಯಮ್ಮ** ತಾ. 27–01–2024ನೇ ಶನಿವಾರ ನಿಧನ ಹೊಂದಿದರು. ಇವರು ಪತಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

## ಬೆಳ್ತಂಗಡಿ ಸಭಾದ ನವೀಕೃತ ಸಭಾಭವನ ಉದ್ಘಾಟನೆ



ದಿನಾಂಕ 20–01–2024ರಂದು ಬೆಳ್ತಂಗಡಿ ಸಭಾದ ನವೀಕೃತ ಸಭಾಭವನದಲ್ಲಿ ಸಂಜೆ ರಾಕ್ಷೋಘ್ನಹೋಮ, ವಾಸ್ತುಪೂಜೆ ನಡೆಸಲಾಯಿತು. ದಿನಾಂಕ 21–01–2024ರಂದು ಬೆಳಗ್ಗೆ ಗಣಹೋಮ, ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನಡೆಸಿ, ಧಾರ್ಮಿಕ ಸಭೆಯನ್ನು ಆಯೋಜಿಸಲಾಗಿತ್ತು.

ಸ್ಥಾನಿಕ ಮಹಾಮಂಡಲದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್ ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಬಂದ ಪ್ರಯುಕ್ತ ಹಾಗೂ ಕು। ತನುಶ್ರೀ ಇವರು 'ಝೀ ಕನ್ನಡ' ವಾಹಿನಿಯ 'ಸರಿಗಮಪ ಸೀಸನ್ 19'ರಲ್ಲಿ 2ನೇ ರನ್ನರ್ ಅಪ್ ಆದ ಬಗ್ಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಭಾದ ನವೀಕೃತ ಸಭಾಭವನವನ್ನು ಉದ್ಘಾಟಿಸಿದ ಸ್ಥಾನಿಕ ಮಹಾಮಂಡಲದ ನಿಯೋಜಿತ ಅಧ್ಯಕ್ಷರಾದ ಕುಚ್ಚೂರು ಶ್ರೀ ಮಂಜುನಾಥ್ ಹೆಬ್ಬಾರ್‌ರವರು ಮಾತನಾಡಿ ನಮ್ಮ ಸಮಾಜದ ವಿವಿಧ ಕಾರ್ಯಕ್ರಮಗಳಿಗೆ ನಮಗೆ ಕಟ್ಟಡ ಬೇಕು. ಈಗ ಕೆಲವು ಸಂಘಗಳಲ್ಲಿ ಸ್ವಂತ ಕಟ್ಟಡ ಇರುವುದಿಲ್ಲ. ಆಗ ಕಾರ್ಯಕ್ರಮ ನಡೆಸಲು ಆಸಕ್ತಿ ಬರುವುದಿಲ್ಲ. ನೀವು ಅತ್ಯುತ್ತಮವಾದ ಕಟ್ಟಡವನ್ನು ರಚಿಸಿಕೊಂಡಿದ್ದೀರಿ. ಆದ್ದರಿಂದ ನಿಮ್ಮಲ್ಲಿ ನಿರಂತರವಾಗಿ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ ಎಂದರು.

ಮಹಾಮಂಡಲದ ನೇತೃತ್ವದಲ್ಲಿ ಬೆಳ್ತಂಗಡಿ ಸಭಾದ ಆಶ್ರಯದಲ್ಲಿ ಸ್ಥಾನಿಕ ಸಮಾವೇಶ ಅತ್ಯಂತ ಯಶಸ್ವಿಯಾಗಿ ನಡೆದಿದೆ. ನಿಮ್ಮಲ್ಲಿ ಸಭಾದ ಕಾರ್ಯಕ್ರಮದಲ್ಲಿ ತೊಡಗಿಸಿ ಕೊಳ್ಳುವವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಇದು ಸಾಧ್ಯವಾಯಿತು ಎಂದರು. ಮುಂದುವರಿಸಿ ಮಹಾಮಂಡಲದ ಅಧ್ಯಕ್ಷರಾಗಿ ನನ್ನನ್ನು ನೀವೆಲ್ಲರೂ ಸೇರಿ ಮಾಡಿದ್ದೀರಿ. ಮುಖ್ಯವಾಗಿ ಬ್ರಾಹ್ಮಣ ಸಂಪ್ರದಾಯಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ, ಸಹಕಾರ ನೀಡಿ ಎಂದರು. ನಿಮ್ಮ ಸಂಘಕ್ಕೆ ಸಹಕಾರ ಬೇಕಿದ್ದರೂ ಕೇಳಬಹುದು ಎಂದರು.

ಸನ್ಮಾನಿತರಾದ ಶ್ರೀ ದೇವಾನಂದ ಭಟ್ ಇವರು ಮಾತನಾಡಿ ಬೆಳ್ತಂಗಡಿಯವರು ಕಟ್ಟಡದ ಹೊರಭಾಗವನ್ನು ಅಲಂಕರಿಸದೆ ಒಳಭಾಗವನ್ನು ಉತ್ತಮವಾಗಿ ಮಾಡಿದ್ದಾರೆ. ಇದರಿಂದ ಬಾಹ್ಯ ಸೌಂದರ್ಯಕ್ಕೆ ಬೆಲೆ ಕೊಡದೆ ಆಂತರಿಕ ಸೌಂದರ್ಯಕ್ಕೆ ಬೆಲೆ ಕೊಡುವವರು ಎಂದು ತಿಳಿದುಬರುತ್ತದೆ ಎಂದರು.

ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀ ಶಿವಾನಂದ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯದರ್ಶಿ ಶ್ರೀ ವಿಕಾಸ್ ರಾವ್, ಸಭಾದ ಪೂರ್ವಾಧ್ಯಕ್ಷರೂ, ಸಭಾದ ಬೆನ್ನೆಲುಬಾಗಿ ನಿಂತಿರುವ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್, ಧರ್ಮಸ್ಥಳ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಸ್ವಾತಿ ವಿಶ್ವಜಿತ್, ಯುವವೇದಿಕೆ ಅಧ್ಯಕ್ಷರಾದ ಶ್ರೀ ಹರೀಶ್ ರಾವ್ ಉಪಸ್ಥಿತರಿದ್ದರು.

ಸಭಾದ ಪೂರ್ವಾಧ್ಯಕ್ಷರಾದ ಶ್ರೀ ಬಿ. ಕೆ. ಧನಂಜಯ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿಕಟಪೂರ್ವಾಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್ ಉದ್ಘಾಟಕರನ್ನು ಪರಿಚಯಿಸಿದರು. ಶ್ರೀಮತಿ ಶುಭ ಹಾಗೂ ಶ್ರೀಮತಿ ನಿಶಾರವರು ನಿರ್ವಹಿಸಿದ ಕಾರ್ಯಕ್ರಮದಲ್ಲಿ ಶ್ರೀ ವಸಂತ ರಾವ್ ಧನ್ಯವಾದವಿತ್ತರು.


**ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)**

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

✆ : 9880968032 / 0824-2982095

**ಶಾಖೆಗಳು**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |

ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. 10,000/- ಠೇವಣಿ ಅವಧಿ : 88 ತಿಂಗಳು

ವಿಶೇಷ ಬಡ್ಡಿದರ : 9.6%



**PREETHIKA AUTOMOBILES**

✆ 2493633 9845851573

*Wholesale & Retail Dealers in :*


*2 & 3 WHEELERS, SPARES & ACCESSORIES*

KARANGALPADY, MANGALORE - 575 003

*Dealers in :*

Minda Switches, M. K. Products, Swiss Auto Products, Power Coils





Prop. : SUDHAKAR BELLE

✆ : 9845193103/ 9481563103

**KARAN DIGITAL STUDIO**

Sadasukh Building, Nr. Postoffice, Padubidri - 574 111

Opp. Busstand Belman

All Marriage & Other functions Photography & Videography Available



ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ

**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**

ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ

ಕದ್ರಿ, ಮಂಗಳೂರು - 575 003



**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ನರಸಿಂಹಗಡ (ಗಡಾಯಿಕಲ್ಲು) ಚಾರಣ

ದಿನಾಂಕ 14–01–2024ರಂದು ಮಕರ ಸಂಕ್ರಮಣದ ಪರ್ವಕಾಲ ಪ್ರಾತಃಕಾಲದಲ್ಲಿ 5–15ಕ್ಕೆ 24 ಜನ ಸ್ಥಾನಿಕಬಾಂಧವರು ಬೆಳ್ತಂಗಡಿಯ ನಮ್ಮ ಸಭಾದ ಎದುರು ಒಟ್ಟುಗೂಡಿದ್ದರು. ಚುಮು ಚುಮು ಚಳಿಯಲ್ಲಿಯೂ ಏನೋ ಉತ್ಸಾಹ ಅವರಲ್ಲಿ ಕಂಡುಬರುತ್ತಿತ್ತು. ಇವರು ಬೇರಾರೂ ಅಲ್ಲ. ನಮ್ಮ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ ಸ್ಥಾನಿಕ ಬಂಧುಗಳು ನರಸಿಂಹಗಡಕ್ಕೆ ಚಾರಣ ಹೊರಟ ಪರಿ.

ಬೆಳಗ್ಗೆ ಗಂಟೆ 5–45ಕ್ಕೆ ಹೊರಟು ನರಸಿಂಹಗಡದತ್ತ 5 ಕಾರುಗಳಲ್ಲಿ ಸಾಗಿದೆವು. ನಾನೂ ಒಬ್ಬ ಧರ್ಮಸ್ಥಳ ವಲಯದಿಂದ ಭಾಗವಹಿಸಿದ್ದೆ. ಗಂಟೆ 6–00ಕ್ಕೆ ನರಸಿಂಹಗಡದ ಬುಡಕ್ಕೆ ತಲುಪಿದೆವು.

ಅರಣ್ಯ ಇಲಾಖೆಯ ಒಬ್ಬ ಸಿಬ್ಬಂದಿ ಅಲ್ಲಿರುತ್ತಾರೆ. ಆನ್‌ಲೈನ್ ಮೂಲಕ ನೋಂದಾಯಿಸಲು ತಿಳಿಸುತ್ತಾರೆ. ನೋಂದಾವಣೆಯಾದೊಡನೇ ವಯಸ್ಕರಿಗೆ ತಲಾ ರೂ. 50–00, ಮಕ್ಕಳಿಗೆ (5 ವರ್ಷ ದಾಟಿದವರಿಗೆ) ರೂ. 25–00ರಂತೆ ಶುಲ್ಕ ಪಾವತಿಸಿ, ನಮ್ಮ ಪಯಣವನ್ನು ಮೇಲ್ಮುಖವಾಗಿ ಆರಂಭಿಸಿದೆವು. ಹೊರಡುವಾಗ ನಿಮ್ಮಲ್ಲಿ ಎಷ್ಟು ಪ್ಲಾಸ್ಟಿಕ್ ನೀರಿನ ಬಾಟಲ್ ಇದೆ ಎಂದು ದಾಖಲಿಸಿಕೊಳ್ಳುತ್ತಿದ್ದು, ಅಷ್ಟೇ ಬಾಟಲಿಗಳನ್ನು ಹಿಂದಿರುಗಿ ಬರುವಾಗ ತರಬೇಕೆಂದಿದೆ. ಇದು ಪರಿಸರ ಹಾಳುಮಾಡಬಾರದೆಂಬ ಉದ್ದೇಶಕ್ಕಾಗಿದೆ. ಮಕ್ಕಳು ಮತ್ತು ಯುವಕರು ವೇಗವಾಗಿ ಸಾಗಿ ಅಲ್ಲಲ್ಲಿ ಕುಳಿತು, ಎದ್ದು ಸಾಗಿದರು. ಕೆಲವರು ಆರಂಭದಿಂದಲೇ ನಾಲ್ಕು ಕಾಲಿನ ನಡಿಗೆ ಪ್ರಾರಂಭಿಸುತ್ತಿದ್ದರು.

ಒಂದು ಕಿಲೋಮೀಟರ್‌ನಷ್ಟು ದೂರವಿದೆಯೆಂದಾಗ ಮೆಟ್ಟಿಲು ಲಂಬವಾಗುತ್ತಾ ಹೋಗುತ್ತದೆ. ಅದನ್ನು ನೇರವಾಗಿ ಹತ್ತಲು ಪ್ರಯತ್ನಿಸಿದರೆ ಹಿಂದೆ ವಾಲಿ ಬೀಳುವ ಸ್ಥಿತಿ ಇದೆ. ಅದಕ್ಕಾಗಿ ಅದನ್ನು ನಾಲ್ಕು ಕಾಲಿನಲ್ಲಿ ಯಾ ಮುಂದಕ್ಕೆ ಸ್ವಲ್ಪ ಬಾಗಿ ಏರಿದರೆ ಸುಲಭವಾಗುತ್ತದೆ. 8–45ಕ್ಕೆ ನಮ್ಮ ಉತ್ಸಾಹಿಗಳ ತಂಡ ತುದಿಯನ್ನು ತಲುಪಿತು. 9–00 ಗಂಟೆಗೆ ಕೊನೆಯ ತಂಡವೂ ಸೇರಿಕೊಂಡಿತು. ಮೇಲಿನಿಂದ ಚಂದ್ಕೂರು ದೇವಸ್ಥಾನ, ಲಾಯಿಲ ಗ್ರಾಮದ ಮನೆಗಳು, ರಸ್ತೆ ನದಿಯನ್ನು ನೋಡಿ ಗುರುತಿಸಿದೆವು. ಇಲ್ಲಿಯೇ ಟಿಪ್ಪು ಡ್ರಾಪ್ ಇದೆ. ಇಲ್ಲಿರುವ ಕೆರೆಯಲ್ಲಿ ನೀರು ತುಂಬಿಕೊಂಡಿದೆ. ಮೇಲ್ಭಾಗದಲ್ಲಿ ಮುಳಿಹುಲ್ಲು ಹುಲುಸಾಗಿ ಬೆಳೆದಿದೆ. ಒಂದು ಗಂಟೆಗಳ ಕಾಲ ಫೋಟೋ ಶೂಟಿಂಗ್, ಮನೆ, ನದಿಗಳ ಹುಡುಕಾಟದಲ್ಲಿ ಕಳೆದು ಗಂಟೆ 10–00ಕ್ಕೆ ಮರುಪ್ರಯಾಣ ಆರಂಭವಾಯಿತು.



ಆಗಲೂ ಮಕ್ಕಳೇ ಮೊದಲಿಗರು. ಮೊದಲತಂಡ ಕೆಳಗೆ ತಲುಪುವಾಗ ಗಂಟೆ 10–30. ಕೊನೆಯತಂಡ ತಲುಪುವಾಗ ಗಂಟೆ 11–00. ಹಿಂದಕ್ಕೆ ಬರುವಾಗ 2 ಗೋಣಿಚೀಲಗಳಲ್ಲಿ ಯಾರೋ ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲ್, ಪ್ಲಾಸ್ಟಿಕ್ ಲಕೋಟೆಗಳನ್ನು ಹೆಕ್ಕಿಕೊಂಡು ಬಂದು, ಅದಕ್ಕಾಗಿಯೇ ಕೆಳಗೆ ಇರಿಸಿದ್ದ ಜಾಗಕ್ಕೆ ತಲುಪಿಸಿದೆವು. ಅರಣ್ಯ ವಸತಿಗೃಹದ ಬಳಿ 2 ಬಿದಿರು, 2 ಹಲಸಿನ ಗಿಡ ನೆಟ್ಟು ನಮ್ಮ ಸಭಾದತ್ತ ಮರುಪ್ರಯಾಣ ಬೆಳೆಸಿದೆವು. ಅಲ್ಲಿ ದಿಶಾ ಫುಡ್ ಕಾರ್ನರ್‌ನಿಂದ ಬಂದ ಉಪಾಹಾರ ತಯಾರಾಗಿತ್ತು. ಸರಿಯಾಗಿ ತಿಂದು ಸ್ವಲ್ಪ ಮಟ್ಟಿಗೆ ತೂರಾಡುತ್ತಾ ಮನೆಯತ್ತ ಸಾಗಿದೆವು. ಚಾರಣ ಎಲ್ಲರಿಗೂ ಖುಷಿಯನ್ನು ನೀಡಿತು. ಗುಡ್ಡಹತ್ತುವ ಸಾಮರ್ಥ್ಯ ಯಾರಿಗೆ ಎಷ್ಟಿದೆ ಎಂಬುದನ್ನು ಒರೆಗೆ ಹಚ್ಚಲು ಅವಕಾಶವಾಯಿತು. ಬೆಳಗ್ಗೆ ಹೊರಡುವಾಗ ತಲೆಗೆ ಟೊಪ್ಪಿ, ಸ್ವೆಟರ್ ಹಾಕಿಕೊಂಡಿದ್ದವರು ಮಧ್ಯೆ ದಾರಿಯಲ್ಲೇ ಕಳಚಿ ಹೆಗಲಿಗೆ ಬಂದಿತ್ತು. ಬೆವರು ಅವಿರತವಾಗಿ ಹರಿಯಿತು.

**ನರಸಿಂಹಗಡ (ಗಡಾಯಿಕಲ್ಲು)ಕ್ಕೆ ಚಾರಣ ಹೋಗುವವರಿಗೆ**
**ಕೆಲವೊಂದು ಸಲಹೆ – ಸೂಚನೆಗಳು**

- ಬೆಳಗ್ಗೆ ಗಂಟೆ 6–45ಕ್ಕೆ ನರಸಿಂಹಗಡದ ಪ್ರವೇಶದ್ವಾರದ ಬಳಿ ಇರಬೇಕು. ತಡವಾದರೆ ಬಿಸಿಲಿನಲ್ಲಿ ಬಸವಳಿಯಬೇಕಾಗುತ್ತದೆ.
- ಬೆಳಗ್ಗೆ ಸ್ವಲ್ಪ ಮಟ್ಟಿಗೆ ಉಪಾಹಾರ ಮಾಡಿಯೇ ಬರುವುದು ಒಳ್ಳೆಯದು.
- ಸಣ್ಣ ಕೈಚೀಲದಲ್ಲಿ ಮಿಠಾಯಿ, ಬಿಸ್ಕೆಟ್, ನೀರು ತರುವುದು ಒಳಿತು. ಪ್ಲಾಸ್ಟಿಕ್ ಬಾಟಲ್ (ಬಿಸಾಡುವ) ತರದಿದ್ದರೆ ಒಳ್ಳೆಯದು.
- ನಾಲ್ಕರಿಂದ ಐದು ಅಡಿ ಉದ್ದದ ಊರುಗೋಲು ಇದ್ದರೆ ಸ್ವಲ್ಪ ವಯಸ್ಸಾದವರಿಗೆ ಆಧಾರವಾಗುವುದರೊಂದಿಗೆ ಸ್ವಲ್ಪ ಆಯಾಸ ಕಡಿಮೆಯಾಗುತ್ತದೆ.



## ಕಿತ್ತೂರು ರಾಣಿಚೆನ್ನಮ್ಮ ಪ್ರಶಸ್ತಿಗೆ ಆಯ್ಕೆ

ಪ್ರತಿಷ್ಠಿತ ಕಿತ್ತೂರು ರಾಣಿಚೆನ್ನಮ್ಮ ಪ್ರಶಸ್ತಿ ವಿಜೇತೆ ಶಾರದಾ ಮಹಿಳಾ ಮಂಡಲದ ಅಧ್ಯಕ್ಷೆಯಾಗಿ **ಶ್ರೀಮತಿ ಸಾವಿತ್ರಿ ಮನೋಹರ್** ಆಯ್ಕೆಗೊಂಡಿರುತ್ತಾರೆ.

Muralidhara Rao Adyapadi
Proprietor
Mob : 94480 27259
99803 16434



SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–



ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)



PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–



ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

Sri Hari Adyapady
Proprietor



Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE



We undertake all types of Electrical,
Plumbing and Sanitary works

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅಯೋಧ್ಯಾ ಶ್ರೀ ಬಾಲರಾಮ (ರಾಮಲಲ್ಲಾ) ಪ್ರತಿಷ್ಠಾಪನಾ ಸಂಭ್ರಮ – ರಾಮೋತ್ಸವ

**ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ**

**॥ ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇದಸೇ ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥**

ದಿನಾಂಕ 22–01–2024ನೇ ಸೋಮವಾರ ಅಯೋಧ್ಯೆಯಲ್ಲಿ ಶ್ರೀ ಬಾಲರಾಮನ ವಿಗ್ರಹದ ಪ್ರಾಣಪ್ರತಿಷ್ಠಾಪನೆಯಾಗುವುದರ ಮೂಲಕ ಹಿಂದೂ ಸಮಾಜದ ಆತ್ಮಗೌರವದ ಪುನರ್‌ಪ್ರತಿಷ್ಠಾಪನೆಯಾಯಿತು– ಶತಮಾನಗಳ ಕಳಂಕ ಕಳೆಯಿತು.

ಈ ಐತಿಹಾಸಿಕ ದಿನವನ್ನು ಸಂಭ್ರಮಿಸುವ ಸಲುವಾಗಿ ಅದೇ ದಿನ ಸಂಜೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಭಾದ ಸಭಾಂಗಣ ಕೇಸರಿ ಬಂಟಿಂಗ್ಸ್, ವಿದ್ಯುತ್ ದೀಪಗಳಿಂದ ಝಗಮಗಿಸುತ್ತಾ ಅಲಂಕೃತಗೊಂಡು ಮದುವಣಗಿತ್ತಿಯಂತೆ ಕಂಗೊಳಿಸುತ್ತಿತ್ತು. ಸಭಾಂಗಣದ ನಾಲ್ಕೂ ದಿಕ್ಕುಗಳಲ್ಲಿ ದೀಪಾವಳಿಯ ಹಾಗೆ ಮಣ್ಣಿನ ಹಣತೆಯಲ್ಲಿ ದೀಪ ಹಚ್ಚಿ ಶ್ರೀರಾಮಚಂದ್ರನ ಚಿತ್ರ ಇರುವ ಬಾವುಟ ನಮ್ಮ ಸನಾತನ ಧರ್ಮದ ಕುರುಹಾಗಿ ಕಂಗೊಳಿಸುತ್ತಿತ್ತು.

ಅಲಂಕಾರಗೊಂಡ ಶ್ರೀರಾಮಚಂದ್ರನ ಗುಡಿಯ ಎದುರು ಪಾವಂಜೆ ಸುಬ್ರಹ್ಮಣ್ಯ ಭಟ್ಟರ ಪೌರೋಹಿತ್ಯದಲ್ಲಿ ಸುಮಂಗಲೆಯರು ದೀಪಬೆಳಗಿಸಿದರು. ಪ್ರಾರ್ಥನೆಯ ಅನಂತರ ಶ್ರೀ ಶಾರದಾಂಬಾ ಭಜನಾ ಮಂಡಳಿಯ ಸದಸ್ಯರೊಂದಿಗೆ ಸಭಾದ ಎಲ್ಲಾ ಸದಸ್ಯರು ಸೇರಿ ಭಜನಾ



ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀ ಕೃಷ್ಣರಾಜ್ ಹಾರ್ಮೋನಿಯಂ ನುಡಿಸಿ ಸಹಕರಿಸಿದರು. ಬಿಲ್ಲುಬಾಣ ಹಿಡಿದ ಬಾಲರಾಮನಾಗಿ ಆಗಮಿಸಿದ ಶ್ರೀ ಶ್ರೀಹರಿ ಅದ್ಯಪಾಡಿ ಮತ್ತು ಶ್ರೀಮತಿ ಶಶಿಕಲಾ ಇವರ ಮೂವರು ಮಕ್ಕಳು ಶ್ರೀರಾಮ, ಲಕ್ಷ್ಮಣ, ಸೀತೆಯ ವೇಷದಲ್ಲಿ ಎಲ್ಲರ ಮನಸೂರೆಗೊಂಡು ಕಾರ್ಯಕ್ರಮದ ಆಕರ್ಷಣೆಯಾಗಿದ್ದರು. ಅವರಿಗೆ ನೆನಪಿನ ಕಾಣಿಕೆ ನೀಡಲಾಯಿತು.

ತದನಂತರ ಸುಮಾರು 30 ನಿಮಿಷಗಳ ಕಾಲ ಅವರು ಅಯೋಧ್ಯಾಪತಿ ಶ್ರೀರಾಮನ ಬಗ್ಗೆ (ರಾಮಾಯಣದ ಕುರಿತು) ಶ್ರೀ ಸಂಜಯ ಕುಮಾರ್ ಫಲಿಮಾರು ಹಲವಾರು ವಿಷಯಗಳನ್ನು ಸವಿಸ್ತಾರವಾಗಿ ವಿವರಿಸಿದರು.

ಅವರನ್ನು ಪದಾಧಿಕಾರಿಗಳು ಶಾಲು ಹೊದಿಸಿ ವಿಶೇಷವಾಗಿ ಗೌರವಿಸಿದರು. ಹನುಮಾನ್‌ಚಾಲೀಸ್ ಪಠಣ ಮಾಡಲಾಯಿತು. ಅನತಿ ದೂರದಿಂದ ಪಟಾಕಿಯ ಸದ್ದು ದೀಪಾವಳಿ ಹಬ್ಬದ ಸಂಭ್ರಮವನ್ನು ನೆನಪಿಸುತ್ತಿತ್ತು. ಸಂಭ್ರಮದಿಂದ ರಾಮೋತ್ಸವ ಆಚರಣೆಯಲ್ಲಿ ಸಹಕರಿಸಿದ ಸಭಾದ ಅಧ್ಯಕ್ಷರು ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಪದಾಧಿಕಾರಿಗಳಿಗೆ, ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ ಮತ್ತು ಪದಾಧಿಕಾರಿಗಳಿಗೆ, ಮಹಿಳಾವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್ ಮತ್ತು ಎಲ್ಲಾ ಪದಾಧಿಕಾರಿಗಳಿಗೆ, ಸಹಕರಿಸಿದ ಹಾಸ್ಟೆಲ್‌ನ ನಿವಾಸಿಗಳಿಗೆ ಹಾಗೂ ಸರ್ವಸದಸ್ಯರಿಗೆ ಶ್ರೀ ಸುರೇಶ್ ಕಡಬ ಧನ್ಯವಾದವಿತ್ತರು.

ಮಹಾಮಂಗಳಾರತಿಯ ಅನಂತರ ಪ್ರಸಾದ ಭೋಜನದೊಂದಿಗೆ ಅಂದಿನ ಕಾರ್ಯಕ್ರಮವು ವೈಭವದಿಂದ ಸಂಪನ್ನಗೊಂಡಿತು. ಅಯೋಧ್ಯಾಪತಿ ಶ್ರೀರಾಮ ದೇವರು ಎಲ್ಲರಿಗೂ ಸನ್ಮಂಗಳವನ್ನುಂಟು ಮಾಡಲಿ.

**– ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**

✆ : 9739155359

## ಸ್ಥಾನಿಕ ಮಹಾಮಂಡಲ, ಮಂಗಳೂರು



ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.), ಮೂಡಬಿದರೆಯ ಆಡಳಿತ ಮಂಡಳಿಯ ಸಭೆಯು ದಿನಾಂಕ 13–01–2024ನೇ ಶನಿವಾರ ನಡೆಯಿತು. ಮಹಾಮಂಡಲದ ಪದಾಧಿಕಾರಿಗಳು ಭಾಗವಹಿಸಿದ್ದರು. ಅಧ್ಯಕ್ಷರಾದ ಶ್ರೀ ಮಂಜುನಾಥ್ ಹೆಬ್ಬಾರ್ ಮುಂದಿನ ಮೂರು ವರ್ಷದ ಮಹಾಮಂಡಲದ ಉದ್ದೇಶಿತ ಕಾರ್ಯಕ್ರಮಗಳನ್ನು ಸಭೆಯಲ್ಲಿ ತಿಳಿಸಿದರು.

ಸ್ಥಾಪಕ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್, ನಿಕಟಪೂರ್ವ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್, ಕಾರ್ಯದರ್ಶಿ ಶ್ರೀ ಮುರಳೀಧರ ಶರ್ಮ, ಕೋಶಾಧಿಕಾರಿ ಶ್ರೀ ಉದಯಣ್ಣ, ಜೊತೆ ಕಾರ್ಯದರ್ಶಿ ಶ್ರೀ ಕೇಶವ ರಾವ್, ಶ್ರೀ ಅಶೋಕ್ ರಾವ್, ಉಪಾಧ್ಯಕ್ಷರಾದ ಕಾಂತಾವರ ಶ್ರೀ ಪ್ರಭಾಕರ್ ರಾವ್ ಮತ್ತು ಬೊಕ್ಕಸ ಶ್ರೀ ಚಂದ್ರಶೇಖರ್ ರಾವ್ ಉಪಸ್ಥಿತರಿದ್ದರು.

ಮೂಡಬಿದರೆಯ ಸಂಘದಿಂದ ಮಹಾಮಂಡಲದ ಎಲ್ಲಾ ಪದಾಧಿಕಾರಿಗಳನ್ನು ಸಂಘದ ಅಧ್ಯಕ್ಷರು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿದರು. ಮೂಡಬಿದರೆಯ ನಿಯೋಜಿತ ಸಂಘದ ಸ್ಥಳವನ್ನು ಮಹಾಮಂಡಲದ ಪದಾಧಿಕಾರಿಗಳು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯದರ್ಶಿ ಶ್ರೀ ಸುರೇಶ್ ರಾವ್ ಎಲ್ಲರನ್ನೂ ಸ್ವಾಗತಿಸಿ, ಕೊನೆಯಲ್ಲಿ ಬೊಕ್ಕಸ ಶ್ರೀ ಚಂದ್ರಶೇಖರ್ ರಾವ್ ಧನ್ಯವಾದವಿತ್ತರು.




ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ಮೊಲ,** ಬಿ.ಎ., ಎಲ್‌ಎಲ್.ಬಿ.

ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)

2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ

ಪುತ್ತೂರು ತಾಲೂಕು, ದ. ಕ., 574 241

NAVADURGA FINANCIALS
Estd 1998

SCAN ME TO KNOW MORE!!!

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**


**ಮತ್ತು ಶ್ರೀಲತಾ ಹಾಗೂ**

**ತನ್ವಿ, ನಿವೇದ, ದೃತಿ ಮತ್ತು ದ್ರುವ್**

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅಯೋಧ್ಯಾ ಶ್ರೀಬಾಲರಾಮ (ರಾಮಲಲ್ಲಾ) ಪ್ರತಿಷ್ಠಾಪನಾ ಸಂಭ್ರಮ - ರಾಮೋತ್ಸವ



ರಾಮಲಲ್ಲಾ



ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್

(ವಿವರ 7ನೇ ಪುಟದಲ್ಲಿ)




Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur
*Printed at :* Rajesh Power Press, Darbe - 574 202, Puttur, D. K.